Adda247 GET IT ON Google Play

**Signature and Name of Invigilator**

1. (Signature) ______________________

   (Name) ______________________

2. (Signature) ______________________

   (Name) ______________________

**OMR Sheet No. :** ..................................................

(To be filled by the Candidate)

**Roll No.** | | | | | | | |

(In figures as per admission card)

**Roll No.** ______________________

(In words)

**Test Booklet No.**

**J—2108**

**PAPER—II**

# KANNADA

**Time : 1¼ hours]** **[Maximum Marks : 100**

Number of Pages in this Booklet : **16** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the question booklet will be replaced nor any extra time will be given.**
   (iii) After this verification is over, the Test Booklet Number should be entered in the OMR Sheet and the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example :** (A) (B) ● (D)

   where (C) is the correct response.
5. Your responses to the items are to be indicated in the Answer Sheet given **inside the Paper I booklet only**. If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the test booklet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is NO negative marking.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में पचास बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका की क्रम संख्या OMR पत्रक पर अंकित करें और OMR पत्रक की क्रम संख्या इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं। आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है।

   **उदाहरण :** (A) (B) ● (D)

   जबकि (C) सही उत्तर है।
5. प्रश्नों के उत्तर **केवल प्रश्न पत्र I के अन्दर दिये गये** उत्तर-पत्रक पर ही अंकित करने हैं। यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिन्हांकित करते है, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप उत्तर-पुस्तिका पर अपना नाम या ऐसा कोई भी निशान जिससे आपकी पहचान हो सके, किसी भी भाग पर दर्शाते या अंकित करते हैं तो परीक्षा के लिये अयोग्य घोषित कर दिये जायेंगे।
9. आपको परीक्षा समाप्त होने पर उत्तर-पुस्तिका निरीक्षक महोदय को लौटाना आवश्यक है और परीक्षा समाप्ति के बाद अपने साथ परीक्षा भवन से बाहर न लेकर जायें।
10. **केवल नीले/काले बाल प्वाईंट पैन का ही इस्तेमाल करें।**
11. **किसी भी प्रकार का संगणक ( कैलकुलेटर ) या लाग टेबल आदि का प्रयोग वर्जित है।**
12. **गलत उत्तर के लिए अंक नहीं काटे जायेंगे।**

# Test Prime

## ALL EXAMS, ONE SUBSCRIPTION

70,000+ Mock Tests

Personalised Report Card

Unlimited Re-Attempt

600+ Exam Covered

Previous Year Papers

500% Refund

IBPS

NABARD

ATTEMPT FREE MOCK NOW

Adda247 GET IT ON Google Play

# KANNADA

## ಕನ್ನಡ

## PAPER – II

## ಪತ್ರಿಕೆ - II

**Note :** This paper contains **fifty** (50) objective-type questions, each question carrying **two** (2) marks. Attempt **all** of them.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು** (50) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು** (2) ಅಂಕಗಳು ಇರುತ್ತವೆ. **ಎಲ್ಲಾ** ಪ್ರಶ್ನೆಗಳನ್ನು ಉತ್ತರಿಸಿ.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

1. ಹಲ್ಮಿಡಿ ಶಾಸನವು ಈ ರಾಜವಂಶಕ್ಕೆ ಸಂಬಂಧಿಸಿದ್ದು :
   (A) ಕದಂಬ (B) ಚಾಲುಕ್ಯ
   (C) ರಾಷ್ಟ್ರಕೂಟ (D) ಹೊಯ್ಸಳ

2. ಇದೊಂದು ಗದ್ಯ ಕಥಾಗುಚ್ಛ :
   (A) ಕವಿರಾಜಮಾರ್ಗ (B) ಅದ್ಭುತ ರಾಮಾಯಣ
   (C) ಗದಾಯುದ್ಧ (D) ವಡ್ಡಾರಾಧನೆ

3. "ನೀರೊಳಗಿರ್ದುಂ ಬೆಮರ್ತನುರಗ ಪತಾಕಂ" ಎಂಬ ವಾಕ್ಯವನ್ನು ಪ್ರಯೋಗಿಸಿರುವ ಕವಿ :
   (A) ಪಂಪ (B) ರನ್ನ
   (C) ಪೊನ್ನ (D) ಜನ್ನ

4. 'ಶಬ್ದ ಸ್ಮೃತಿ' ಈ ಕೃತಿಯ ಒಂದು ಭಾಗವಾಗಿದೆ :
   (A) ಶಬ್ದಮಣಿದರ್ಪಣಂ (B) ಕಾವ್ಯಾವಲೋಕನ
   (C) ಕರ್ಣಾಟಕ ಭಾಷಾಭೂಷಣ (D) ಕನ್ನಡ ಶಬ್ದಾನುಶಾಸನ

5. 'ನುಡಿದರೆ ಮಾಣಿಕ್ಯ ದೀಪ್ತಿಯಂತಿರಬೇಕು' ಎಂದು ಹೇಳಿದ ವಚನಕಾರ :
   (A) ದೇವರ ದಾಸಿಮಯ್ಯ (B) ಅಲ್ಲಮಪ್ರಭು
   (C) ಬಸವಣ್ಣ (D) ಸಿದ್ಧರಾಮ

Adda247 GET IT ON Google Play

6. 'ಹರಿಕಥಾಮೃತಸಾರ' ಕಾವ್ಯವನ್ನು ರಚಿಸಿದವರು :

(A) ಜಗನ್ನಾಥದಾಸರು (B) ಕನಕದಾಸರು

(C) ಮಹಲಿಂಗರಂಗ (D) ವಿಜಯದಾಸರು

7. 'ನಾದಲೋಲ' ಎಂಬ ಖ್ಯಾತಿಯನ್ನು ಹೊಂದಿರುವ ಕವಿ :

(A) ಲಕ್ಷ್ಮೀಶ (B) ಕುಮಾರವ್ಯಾಸ

(C) ಬೇಂದ್ರೆ (D) ಕುವೆಂಪು

8. 'ಹದಿಬದೆಯ ಧರ್ಮ' ಕಾವ್ಯದ ಛಂದಸ್ಸು :

(A) ಷಟ್ಪದಿ (B) ತ್ರಿಪದಿ

(C) ಸಾಂಗತ್ಯ (D) ಕಂದ

9. 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' – ಈ ವಿಮರ್ಶೆ ಯಾವ ಕಾವ್ಯಕ್ಕೆ ಅನ್ವಯಿಸಲಾಗಿದೆ :

(A) ಅದ್ಭುತ ರಾಮಾಯಣ (B) ಜೈಮಿನಿ ಭಾರತ

(C) ರಾಜಾವಳಿ ಕಥೆ (D) ರಾಮಾಶ್ವಮೇಧ

10. ಕನ್ನಡ ಜನಪದ ಲಾವಣಿಗಳನ್ನು ಮೊದಲು ಸಂಗ್ರಹಿಸಿದ ವಿದ್ವಾಂಸ :

(A) ಫ್ಲೀಟ್ (B) ಕಾಲ್ಡ್‌ವೆಲ್

(C) ಇ.ಪಿ. ರೈಸ್ (D) ಬಿ.ಎಲ್. ರೈಸ್

11. ತೊದ ಭಾಷೆ ಸೇರಿರುವ ಭಾಷಾವರ್ಗ :

(A) ಉತ್ತರ ದ್ರಾವಿಡ ಭಾಷಾವರ್ಗ (B) ಇಂಡೋ–ಆರ್ಯನ್ ಭಾಷಾವರ್ಗ

(C) ದಕ್ಷಿಣ ದ್ರಾವಿಡ ಭಾಷಾವರ್ಗ (D) ಮಧ್ಯ ದ್ರಾವಿಡ ಭಾಷಾವರ್ಗ

Adda247 GET IT ON Google Play

12. 'ಅಂಗಮೊಂಬತ್ತು ತೆರಂ' – ಈ ಹೇಳಿಕೆ ಕಂಡು ಬರುವ ಕೃತಿ :

(A) ಶಬ್ದಾನುಶಾಸನ
(B) ಶಬ್ದಮಣಿದರ್ಪಣಂ
(C) ಶಬ್ದಸ್ಮೃತಿ
(D) ಕವಿರಾಜಮಾರ್ಗ

13. 'ಧ್ವನಿಯೆಂಬುದಲಂಕಾರಂ' ಎಂಬ ವಾಕ್ಯವಿರುವ ಕಾವ್ಯ :

(A) ಧ್ವನ್ಯಾಲೋಕ
(B) ಕಾವ್ಯಾಲಂಕಾರ
(C) ರಸರತ್ನಾಕರ
(D) ಕವಿರಾಜಮಾರ್ಗ

14. 'ವಸ್ತು ಪ್ರತಿರೂಪ' ತತ್ವದ ಪ್ರತಿಪಾದಕ :

(A) ವರ್ಡ್ಸ್‌ವರ್ತ್
(B) ಷೆಲ್ಲಿ
(C) ಟಿ.ಎಸ್. ಇಲಿಯಟ್
(D) ಲಾಂಗೈನಸ್

15. ಭರತನ ಉಕ್ತಿ :

(A) ವಿಭಾನುಭಾವ ವ್ಯಭಿಚಾರಿ ಸಂಯೋಗಾದ್ರಸನಿಷ್ಪತ್ತಿಃ
(B) ಕಾವ್ಯಂ ಗ್ರಾಹ್ಯಂ ಅಲಂಕಾರಾತ್
(C) ವಾಕ್ಯಂ ರಸಾತ್ಮಕಂ ಕಾವ್ಯಂ
(D) ಅತ್ರ ರಸೋ ನಾಯಕಾಶ್ರಯವಿವ

16. 'ಶೋಧನ' ತತ್ವವನ್ನು ಪ್ರತಿಪಾದಿಸಿದವನು :

(A) ಪ್ಲೇಟೊ
(B) ಅರಿಸ್ಟಾಟಲ್
(C) ಎಡ್ವರ್ಡ್‌ಬುಲ್ಲೊ
(D) ಹೊರೇಸ್

17. ಕನ್ನಡದ ಪ್ರಥಮ ಕಾದಂಬರಿ :

(A) ಇಂದಿರಾಬಾಯಿ
(B) ದುರ್ಗೇಶನಂದಿನಿ
(C) ಮುದ್ರಾಮಂಜೂಷ
(D) ಕಲಾವತಿ ಪರಿಣಯ

Adda247 GET IT ON Google Play

18. 'ಸಿರಿಸಂಪಿಗೆ' ನಾಟಕದ ಕರ್ತೃ :

(A) ಚಂದ್ರಶೇಖರ ಪಾಟೀಲ
(B) ಚಂದ್ರಕಾಂತ ಕುಸನೂರು
(C) ಚಂದ್ರಶೇಖರ ಕಂಬಾರ
(D) ಜಿ.ಬಿ. ಜೋಷಿ

19. 'ಮುಳ್ಳುಗಳು' ಕಥಾಸಂಕಲನದ ಕರ್ತೃ :

(A) ವೀಣಾಶಾಂತೇಶ್ವರ
(B) ವಿಜಯಾ ದಬ್ಬೆ
(C) ವೈದೇಹಿ
(D) ಸಾರಾ ಅಬೂಬಕರ್

20. 'ರಸೋ ವೈ ಸಃ' ಕೃತಿಯ ಕರ್ತೃ :

(A) ಪು.ತಿ. ನರಸಿಂಹಾಚಾರ್
(B) ಕುವೆಂಪು
(C) ತೀ.ನಂ. ಶ್ರೀಕಂಠಯ್ಯ
(D) ತಿಪ್ಪೇರುದ್ರ ಸ್ವಾಮಿ

ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :

21. ಚಂಪೂರೂಪದಲ್ಲಿರುವ ಕೃತಿಗಳು :

(i) ಶಬರಶಂಕರವಿಳಾಸ ಮತ್ತು ಪಂಪಭಾರತ
(ii) ಸಮಯ ಪರೀಕ್ಷೆ ಮತ್ತು ಗದಾಯುದ್ಧ
(iii) ಕರ್ನಾಟಕ ಕಾದಂಬರಿ ಮತ್ತು ಶಾಂತಿಪುರಾಣ
(iv) ಕರ್ಣಾಟ ಭಾರತ ಕಥಾಮಂಜರಿ ಮತ್ತು ಅದ್ಭುತ ರಾಮಾಯಣ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii)
(B) (i) ಮತ್ತು (ii)
(C) (iii) ಮತ್ತು (iv)
(D) (ii) ಮತ್ತು (iv)

Adda247 GET IT ON Google Play

**22.** ವಾರ್ಧಕ ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿದವರು :

(i) ಕುಮಾರ ವಾಲ್ಮೀಕಿ ಮತ್ತು ಲಕ್ಕಣ್ಣದಂಡೇಶ

(ii) ಗುಬ್ಬಿ ಮಲ್ಲಣಾರ್ಯ ಮತ್ತು ಮುದ್ದಣ

(iii) ವಿರೂಪಾಕ್ಷ ಪಂಡಿತ ಮತ್ತು ಮೂರನೆಯ ಮಂಗರಸ

(iv) ಲಕ್ಷ್ಮೀಶ ಮತ್ತು ನೇಮಿಚಂದ್ರ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii) (B) (ii) ಮತ್ತು (iv)

(C) (ii) ಮತ್ತು (iii) (D) (i) ಮತ್ತು (iv)

**23.** ಇವರು ಕಾವ್ಯ ಮೀಮಾಂಸೆಯ ಕೃತಿಯನ್ನು ರಚಿಸಿದವರು :

(i) ಭರತ ಮತ್ತು ಆನಂದವರ್ಧನ

(ii) ದಂಡಿ ಮತ್ತು ಕಾಳಿದಾಸ

(iii) ವಾಮನ ಮತ್ತು ಭಾಸ

(iv) ಅಭಿನವಗುಪ್ತ ಮತ್ತು ಕುಂತಕ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv) (B) (i) ಮತ್ತು (ii)

(C) (ii) ಮತ್ತು (iv) (D) (iii) ಮತ್ತು (iv)

**24.** ಇವು ಸಮಾನಾರ್ಥಕಗಳು :

(i) ಮಾನಸಿಕದೂರ

(ii) ಭವ್ಯತೆ

(iii) ಕೆಥಾರ್ಸಿಸ್

(iv) ಸೈಕಿಕಲ್ ಡಿಸ್ಟೆನ್ಸ್

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii) (B) (ii) ಮತ್ತು (iv)

(C) (i) ಮತ್ತು (iv) (D) (ii) ಮತ್ತು (iii)

Adda247 GET IT ON Google Play

25. ಇವು ಖಂಡ ಕಾವ್ಯಗಳು :

(i) ಶ್ರೀರಾಮ ಪಟ್ಟಾಭಿಷೇಕ

(ii) ಗೊಲ್ಗೊಥಾ

(iii) ಚಕೋರಿ

(iv) ಚಿತ್ರಾಂಗದ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)
(B) (ii) ಮತ್ತು (iv)
(C) (i) ಮತ್ತು (iv)
(D) (ii) ಮತ್ತು (iv)

26. ಇವು ವಚನ ಚಳುವಳಿಯ ಹಿನ್ನೆಲೆಯ ನಾಟಕಗಳು :

(i) ಕದಡಿದ ನೀರು

(ii) ಮಹಾಚೈತ್ರ

(iii) ಹರಿ ಜನ್ವಾರ

(iv) ತಲೆದಂಡ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv)
(B) (ii) ಮತ್ತು (iv)
(C) (ii) ಮತ್ತು (iii)
(D) (iii) ಮತ್ತು (iv)

Adda247

27. ಇವು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತ ಕೃತಿಗಳು :

(i) ಮಲೆಗಳಲ್ಲಿ ಮದುಮಗಳು

(ii) ಬದುಕು

(iii) ಮೂಕಜ್ಜಿಯ ಕನಸುಗಳು

(iv) ಹಸುರು ಹೊನ್ನು

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iv)
(B) (i) ಮತ್ತು (ii)
(C) (ii) ಮತ್ತು (iii)
(D) (iii) ಮತ್ತು (iv)

Adda247 GET IT ON Google Play

**28.** ಇವು ಮರಾಠಿಯಿಂದ ಸ್ವೀಕೃತ ಪದಗಳು :

(i) ಪೆದ್ದ

(ii) ಬಾಹತ್ತರ್

(iii) ಚಾವಡಿ

(iv) ಲಗಾಮು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii)
(B) (ii) ಮತ್ತು (iv)
(C) (ii) ಮತ್ತು (iii)
(D) (i) ಮತ್ತು (iv)

**29.** ಇವು ಸಮರೂಪಧಾರಣೆಗೆ ಉದಾಹರಣೆಗಳು :

(i) ಹೊತ್ತು

(ii) ಗದ್ದೆ

(iii) ಮತ್ತು

(iv) ಬಿತ್ತು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii)
(B) (ii) ಮತ್ತು (iv)
(C) (ii) ಮತ್ತು (iii)
(D) (i) ಮತ್ತು (ii)

Adda247

**30.** ಇವು ಪ್ರಾಕೃತ ಶಬ್ದಗಳಗೆ ಉದಾಹರಣೆಗಳು :

(i) ನೇಹ

(ii) ಠಾಣ

(iii) ಮಣಿ

(iv) ಮಂಚ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)
(B) (i) ಮತ್ತು (iii)
(C) (ii) ಮತ್ತು (iv)
(D) (iii) ಮತ್ತು (iv)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ**

**ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.**

ಭಾರತ ದೇಶ ಮೋಸ ಹೋಗಿದೆ. ಭಾರತದ ಜನರು ವಂಚನೆಗೆ ಒಳಗಾಗಿದ್ದಾರೆ. ಮೋಸ ಮಾಡಿದವರಾರು ? ವಂಚಿಸಿದವರು ಯಾರು ? ಇದೀಗ ಪ್ರಶ್ನೆ. ಈ ಪುಸ್ತಕದಲ್ಲಿ ಒಂದು ಕಡೆ, ಗಾಂಧೀಜಿಯವರು ತೀರಿಕೊಂಡ ಎಷ್ಟೋ ವರ್ಷಗಳ ಮೇಲೆ, ಸಿ. ರಾಜಗೋಪಾಲಾಚಾರಿಯವರು ಅವರನ್ನು ತಮ್ಮ ಕನಸಿನಲ್ಲಿ ಭೆಟ್ಟಿಯಾದ ಪ್ರಸಂಗದ ಪ್ರಸ್ತಾವವಿದೆ. ಅದರಲ್ಲಿ ಈ ಪ್ರಶ್ನೆಗೆ ಉತ್ತರವಿದೆ. ರಾಜಾಜಿಯವರು ೧೯೭೨ ರಲ್ಲಿ ಒಂದು ಕನಸು ಕಂಡರಂತೆ. ಆ ಕನಸಿನಲ್ಲಿ ಅವರು ಗಾಂಧೀಜಿಯವರು ಸ್ವರ್ಗದಿಂದ ಭಾರತಕ್ಕೆ ಇಳಿದು ಬರುವಂತೆ ಮಾಡಿದರು. ಗಾಂಧೀಜಿ ಮತ್ತು ರಾಜಾಜಿ ಅವರ ನಡುವಿನ ಸಂಭಾಷಣೆಯಲ್ಲಿ ರಾಜಾಜಿ ಕೇಳಿದರು – "ಬಾಪೂ, ಈ ದೇಶವನ್ನು ನೋಡಿಕೊಳ್ಳಲು ನಿಮಗೆ ವಹಿಸಿದರೆ, ನಿಮ್ಮ ಮೊದಲನೆಯ ಕೆಲಸವೇನು ?" ಅದಕ್ಕೆ ಗಾಂಧೀಜಿ ಹೇಳಿದರಂತೆ – "ನನ್ನ ಮೊದಲನೆಯ ಕೆಲಸ, ಭಾರತೀಯರ ವಿರುದ್ಧವಾಗಿ, ಅವರ ಆಷಾಢಭೂತಿತನ ಹಾಗೂ ಅಪ್ರಾಮಾಣಿಕತೆಯ ವಿರುದ್ಧವಾಗಿ ಯುದ್ಧ ಹೂಡುವುದು !" ಭಾರತ ಮೋಸ ಹೋಗಿರುವುದು ಭಾರತೀಯರಿಂದ ! ಭಾರತೀಯರು ವಂಚಿತರಾಗಿರುವುದು ಭಾರತೀಯರಿಂದಲೆ !

ಶತ್ರುಗಳು ಹೊರಗಿನವರಾದರೆ, ಅವರು ಯಾರು ಏನು ಎಂಬುದು ನಮಗೆ ತಿಳಿದಿರುತ್ತದೆ. ಅವರು ಒಳಗಿನವರೇ ಆಗಿದ್ದಾಗ ಅವರ ವಿಚಾರ ಏನೆಂಬುದು ತಿಳಿಯುವುದಿಲ್ಲ. ಅವರು ಯಾರು ಎಂಬುದು ಗೊತ್ತಾಗುವುದೂ ಕಷ್ಟ. ಭಾರತದ ಶ್ರೀಸಾಮಾನ್ಯ ಇಂಥದೊಂದು ಪರಿಸ್ಥಿತಿಯನ್ನು ಎದುರಿಸುತ್ತಿದ್ದಾನೆ. ಈ ಪರಿಸ್ಥಿತಿಯ ಒಂದು ಕ್ಷ–ಕಿರಣ ಚಿತ್ರ ಪ್ರಸ್ತುತ ಪ್ರಸಕ್ತ ಎಂದರೆ ತಪ್ಪಾಗುವುದಿಲ್ಲ. ಇದರಲ್ಲಿ ಭಾರತವನ್ನು ಕ್ಷ–ಕಿರಣಗಳಿಗೆ ಒಳಪಡಿಸಲಾಗಿದೆ. ದೇಹದ ಒಳಗಿನ ಸ್ಥಿತಿ ಏನು ಎಂಬುದು ಕಾಣಿಸುತ್ತಿದೆ. ಎಲ್ಲಿ ನರಗಳು ಕತ್ತರಿಸಿವೆ, ಎಲ್ಲಿ ಮೂಳೆ ಮುರಿದಿದೆ, ಎಲ್ಲಿ ರಕ್ತ ಗಂಟುಗಟ್ಟಿದೆ, ಯಾವ ಭಾಗ ಕೊಳೆತಿದೆ, ಯಾವ ಗಂಟು ಹೊರಳಿದೆ – ಮುಂತಾದುದೆಲ್ಲ ಈ ಚಿತ್ರದಲ್ಲಿ ಚೆನ್ನಾಗಿ ಕಾಣಿಸುತ್ತಿದೆ. ಅದಕ್ಕೆ ಅಗತ್ಯವಾಗಿ ಒಡನೆಯೇ ಚಿಕಿತ್ಸೆಯಾಗಬೇಕಾಗಿದೆ. ಬೇರೆ ಬೇರೆ ವೈದ್ಯರುಗಳ ನೆರವು ಪಡೆದುಕೊಂಡ ತುರ್ತು ಚಿಕಿತ್ಸೆಗೆ ಪ್ರಾರಂಭಿಸಬೇಕಾಗಿದೆ ಎಂದು 'ಭಾರತ: ಮೋಸ ಹೋದ ದೇಶ' ಕರೆ ಕೊಡುತ್ತದೆ. ಕಾಯಿಲೆಯಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ; ಕಾಯಿಲೆಯ ಸ್ವರೂಪವೇನೆಂಬುದನ್ನು ಇದು ವಿವರಿಸುತ್ತದೆ.

ಆರಂಭದ ಲೇಖನ – 'ಭಾರತ ಮೋಸ ಹೋಗಿದೆ ಹೇಗೆ, ಏಕೆ?' ಮುಕ್ತಾಯದ ಲೇಖನ – 'ಹೌದು, ಭಾರತ ಮೋಸ ಹೋಗಿದೆ. ಅದಕ್ಕೆ ನಾವೇನು ಮಾಡಬೇಕು ?'– ಇವೆರಡನ್ನೂ ಸಂಪಾದಕರೇ ಬರೆದಿದ್ದಾರೆ. ಮೊದಲನೆಯ ಲೇಖನದಲ್ಲಿ ಸಮಕಾಲೀನ ಸಂದರ್ಭಗಳ ವಿವರವಾದ ವಿಶ್ಲೇಷಣೆಯಿದೆ. ಕೊನೆಯ ಲೇಖನದಲ್ಲಿ ಅನಿವಾರ್ಯವಾದ, ಶ್ರೇಯಸ್ಕರವಾದ ಆಶಾವಾದ ಅಭಿವ್ಯಕ್ತವಾಗಿದೆ; ಸಮೃದ್ಧಿ ಹಾಗೂ ಶಾಂತಿಯ ದೃಷ್ಟಿಯಿಂದ ನಮ್ಮ ದೇಶ ಒಂದಲ್ಲ ಒಂದು ದಿನ ಮುಂಚೂಣಿಗೆ ಬರುತ್ತದೆ ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸಲಾಗಿದೆ. ಸಂಪಾದಕರ ಈ ಲೇಖನಗಳ ನಡುವಿನ ೨೩ ಲೇಖನಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಿಕೊಡಲಾಗಿದೆ. ಮೊದಲನೆಯ ಭಾಗ ಸಂಕಟಗಳ ವಿಶ್ಲೇಷಣೆ ಎಂಬುದರಲ್ಲಿ ಎಂಟು ಲೇಖನಗಳಿವೆ. ನಮ್ಮ ಸಂಸ್ಥೆಗಳ ಅವನತಿಯನ್ನು ಅರಿಯುವುದು ಎಂಬ ಎರಡನೆಯ ಭಾಗದಲ್ಲಿ ಒಂಬತ್ತು ಲೇಖನಗಳಿವೆ. ಮೌಲ್ಯಗಳ ರಕ್ಷಣೆ ಎಂಬ ಕೊನೆಯ ಭಾಗದಲ್ಲಿ ಆರು ಲೇಖನಗಳಿವೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಈ ನಲುವತ್ತಾರು ವರ್ಷಗಳಲ್ಲಿ ನಾವು ಪ್ರಗತಿಯನ್ನು ಸಾಧಿಸಿಯೇ ಇಲ್ಲ ಎಂದು ಹೇಳಲಾಗದು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ನಾವು ಒಂದು ಗುಂಡುಸೂಜಿಯನ್ನೂ ತಯಾರಿಸುತ್ತಿರಲಿಲ್ಲ ! ಈಗ ಈ ವಿದ್ಯುನ್ಮಾನ ಯುಗದಲ್ಲಿ ಭಾರತ ಮುಂದುವರಿದ ದೇಶಗಳೊಡನೆ ಸ್ಪರ್ಧಿಸುತ್ತಿದೆ ಎಂಬುದು ನಿಜವಾದರೂ ನಮ್ಮ ಪ್ರಗತಿಯ ಹಾದಿಯ ಆಯ್ಕೆಯಲ್ಲಿ ಸಮತೋಲನ ತಪ್ಪಿದ್ದರಿಂದ, ಲಕ್ಷಾಂತರ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದೂ ನಮಗೆ ಸಾಧ್ಯವಾಗಿಲ್ಲ ! ದೇಶದ ಅರ್ಧ ಭಾಗದ ಜನ ಇನ್ನೂ ಬಡತನ ರೇಖೆಯ ಕೆಳಗೇ ಉಳಿದಿದ್ದಾರೆ. ದೇಶ ಏನು ಪ್ರಗತಿಯನ್ನು ಸಾಧಿಸಿದ್ದರೂ, ಜನಸಂಖ್ಯೆಯನ್ನು ನಿಯಂತ್ರಿಸಲು ಸಾಧ್ಯವಾಗದಿರುವುದರಿಂದ, ಸಾಧಿಸಿದ ಪ್ರಗತಿಯೆಲ್ಲ ವಿಫಲಗೊಂಡಂತಾಗಿದೆ. ಅಭಿವೃದ್ಧಿಗೆ

Adda247 GET IT ON Google Play

ಸಂಬಂಧಿಸಿದ ಪ್ರತಿಯೊಂದು ಕೆಲಸವನ್ನೂ ರಾಜಕೀಯ ದೃಷ್ಟಿ ಧೋರಣೆಗಳಿಂದಲೇ ಕೈಗೊಳ್ಳುತ್ತಿರುವುದರಿಂದ ಜನರು ಅವುಗಳಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವಂತಾಗಿದೆ. ಓಟುಗಳ ದೃಷ್ಟಿಯಿಂದಲೇ ಆಡಳಿತ ನಡೆಸುವುದರಿಂದ ನಾವು ಸಂಕಟಗಳಿಗೊಳಗಾಗಿದ್ದೇವೆ. ನಮ್ಮಲ್ಲಿ ದೇಶಪ್ರೇಮ ಬೆಳೆಯದಿರಲು ಇದೂ ಒಂದು ಕಾರಣವಾಗಿದೆಯೆಂದರೆ ತಪ್ಪಾಗಲಾರದು.

ದೇಶದ ಅವನತಿಗೆ ಕಾರಣಗಳನ್ನು ಹುಡುಕುತ್ತ ಹೋದರೆ ಬಡತನ, ಅನಕ್ಷರತೆ, ಅಧಿಕ ಜನಸಂಖ್ಯೆ, ಶಿಕ್ಷಣರಂಗದ ವಿಫಲತೆ, ಆರ್ಥಿಕ ದುರವಸ್ಥೆ, ಪರಿಸರದ ಬಗೆಗಿನ ನಿರ್ಲಕ್ಷ್ಯ, ಶಕ್ತಿಮೂಲಗಳ ತಪ್ಪು ಆಯ್ಕೆ, ಜಾತೀಯತೆ, ಧಾರ್ಮಿಕ ರಾಜಕೀಯ, ಭ್ರಷ್ಟಾಚಾರ, ರಾಜಕೀಯ ಗೂಂಡಾಗಿರಿ, ಬುದ್ಧಿಜೀವಿಗಳು ಎನ್ನಿಸಿಕೊಂಡವರ ದ್ವಂದ್ವ – ಇವೇ ಮೊದಲಾದ ಕಾರಣಗಳು ಎದ್ದು ಕಾಣಿಸಿಕೊಳ್ಳುತ್ತವೆ. ಗಿಬ್ಬನ್ನನ ಪ್ರಖ್ಯಾತ ಪ್ರಸಕ್ತ 'ರೋಮನ್ ಸಾಮ್ರಾಜ್ಯದ ಉನ್ನತಿ – ಅವನತಿ' ಯಲ್ಲಿ, ಆ ಸಾಮ್ರಾಜ್ಯದ ಅವನತಿಗೆ ಪಟ್ಟಿ ಮಾಡಲಾದ ಕಾರಣಗಳೆಲ್ಲವೂ ಈಗ ನಮ್ಮ ದೇಶದಲ್ಲಿ ಕಾಣಿಸಿಕೊಳ್ಳುತ್ತಿವೆ – ನ್ಯಾಯಾಂಗದ ಭ್ರಷ್ಟಾಚಾರವೂ ಸೇರಿದಂತೆ ! ಪ್ರಜಾಪ್ರಭುತ್ವ ಪದ್ಧತಿ ಶ್ರೇಷ್ಠವಾದುದೇನೋ ನಿಜ. ಆದರೆ ನಾವು ಅದಕ್ಕೆ ಅರ್ಹರಾಗಿದ್ದೇವೆಯೇ ಎಂಬುದು ಪ್ರಶ್ನೆ. ನಿರಕ್ಷರತೆ ಹಾಗೂ ಬಡತನಗಳು ತುಂಬಿದ ದೇಶದಲ್ಲಿ ಈ ಪದ್ಧತಿ ಯಶಸ್ವಿಯಾಗುವುದು ಕಷ್ಟ. ನಾವು ಕೈ ಎತ್ತುತ್ತೇವೆ. ಸರಿ, ಹಾಗೆ ಕೈ ಎತ್ತುವುದರ ಹಿಂದೆ ಆಲೋಚನೆ ಇದೆಯೇ, ಚಿಂತನೆ ಇದೆಯೇ ಎಂಬುದನ್ನು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ.

ಭ್ರಷ್ಟಾಚಾರಕ್ಕೆ ಸಾಮಾಜಿಕ ಮನ್ನಣೆ ದೊರೆತದ್ದು ಸ್ವತಂತ್ರ ಭಾರತದ ಮಹಾಸಾಧನೆಗಳಲ್ಲಿ ಒಂದು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ, ದೇಶಕ್ಕೆ ಸ್ವಾತಂತ್ರ್ಯ ತರುವುದೊಂದೇ ಎಲ್ಲರ ಗುರಿಯಾಗಿತ್ತು. ಪ್ರಾಣವನ್ನು ಅಲಕ್ಷಿಸಿ ಅವರೆಲ್ಲ ಹೋರಾಡಿದರು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹಾಗೆ ಒಂದು ಗುರಿ ಇರಲಿಲ್ಲ. ಅಧಿಕಾರ ಎನ್ನುವುದು ಹೊಸ ಆಕರ್ಷಣೆಯಾಗಿತ್ತು. ಅದರಲ್ಲಿ ಅನೇಕ ಲಾಭಗಳು ಕಾಣಿಸಿಕೊಂಡವು. ಖೋಟಾ ಸ್ವಾತಂತ್ರ್ಯ ಯೋಧರೂ ಕಾಣಿಸಿಕೊಂಡರು. ಪಿಂಚಣಿ ಮತ್ತು ಉಚಿತ ಮೊದಲ ದರ್ಜೆ ರೈಲು ಪ್ರಯಾಣಗಳಿಗಾಗಿ ಅವರು ಹಾತೊರೆಯತೊಡಗಿದರು. ತ್ಯಾಗ ಬಲಿದಾನಗಳ ಜಾಗದಲ್ಲಿ ಹಣ ಹಾಗೂ ಅನುಕೂಲಗಳು ರಾರಾಜಿಸುವಂತಾಯಿತು. ಪ್ರಾಮಾಣಿಕತೆ ಮತ್ತು ಬಡತನಗಳನ್ನು ಸಮಾಜ ತಿರಸ್ಕರಿಸಿತು. ಭ್ರಷ್ಟಾಚಾರ ಹಾಗೂ ಶ್ರೀಮಂತಿಕೆಯನ್ನು ಪುರಸ್ಕರಿಸಿತು. ಇದರಿಂದ ಮೌಲ್ಯಗಳು ನಶಿಸಿದವು. ಮೌಲ್ಯಾರಾಧನೆ ಎಂಬುದು ನಗೆಪಾಟಲಾಯಿತು. ಅಧಿಕಾರಕ್ಕೆ ಅಪಾರ ಮನ್ನಣೆ ದೊರೆಯಿತು. ಅಧಿಕಾರದಲ್ಲಿರುವವರು ಏನು ಮಾಡಿದರೂ ನಡೆಯುತ್ತದೆ ಎಂಬ ಸ್ಥಿತಿ ಉಂಟಾಯಿತು.

ಸ್ವತಂತ್ರ ಭಾರತದಲ್ಲಿ ಮುಖ್ಯವೆನ್ನಿಸಿದ ವಿಚಾರಗಳು ಎರಡೇ ಎರಡು; ಒಂದು ಅಧಿಕಾರ, ಇನ್ನೊಂದು ಆಡಳಿತ. ಆದರೆ ಅವನ್ನು ಸಮರ್ಥವಾಗಿ, ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ನಿರ್ವಹಿಸುವುದರ ಕಡೆಗೆ ಯಾರೂ ಗಮನ ಕೊಡಲಿಲ್ಲ. ಸರಕಾರದ ಕೆಲಸ ದೇವರ ಕೆಲಸ ಎನ್ನಿಸಿತು ! ಆದರೆ ಅದರಲ್ಲಿ ಭಯ, ಭಕ್ತಿ, ಶ್ರದ್ಧೆಗಳು ಕಾಣಿಸದಾದವು. ದೇಶದ ಆರ್ಥಿಕ ಉನ್ನತಿಯ ದೃಷ್ಟಿಯಿಂದ ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸಲಾಯಿತಾದರೂ ಅವು ನಿರೀಕ್ಷಿತ ಫಲ ಕೊಡಲಿಲ್ಲ. ಯೋಜನೆಗಳ ಮುಖ್ಯ ಉದ್ದೇಶವೆಂದರೆ ಆರ್ಥಿಕ ಬೆಳವಣಿಗೆ, ಬಡತನದ ನಿವಾರಣೆ, ಸ್ವಾವಲಂಬನೆ, ನಿರುದ್ಯೋಗ ನಿರ್ಮೂಲನೆ, ಸಾಮಾಜಿಕ ನ್ಯಾಯ, ಆಧುನೀಕರಣ. ಇವುಗಳ ಕಡೆ ಗಮನ ಕೊಟ್ಟಿದ್ದರೂ ಅವು ಯಶಸ್ವಿಯಾಗಲಿಲ್ಲವೆಂಬುದು ವಿಷಾದದ ಸಂಗತಿ. ನಮಗೆ ಅಗತ್ಯವಾದ ಯೋಜನೆಗಳನ್ನು ಸಮರ್ಥವಾಗಿ ನಿರ್ವಹಿಸುವುದು ಸಾಧ್ಯವಾಗಲಿಲ್ಲ.

**31.** ಈ ಬರಹಕ್ಕೆ ನೀಡಬಹುದಾದ ಶೀರ್ಷಿಕೆ :

(A) ದೇಶದ ಸ್ಥಿತಿಗತಿ

(B) ಭ್ರಷ್ಟಾಚಾರ

(C) ಭಾರತ: ಮೋಸಹೋದ ದೇಶ

(D) ದೇಶದ ಅವನತಿ

Adda247 GET IT ON Google Play

**32.** ದೇಶ ಮೋಸ ಹೋಗಲು ಕಾರಣಗಳು :

(i) ಭಾರತೀಯರ ಆಷಾಢಭೂತಿತನ ಮತ್ತು ಅಪ್ರಾಮಾಣಿಕತೆ

(ii) ದೇಶದ ಪ್ರಜಾಪ್ರಭುತ್ವವೇ

(iii) ಓಟುಗಳ ದೃಷ್ಟಿಯಿಂದಲೇ ಆಡಳಿತ ನಡೆಸುತ್ತಿರುವುದು

(iv) ಪ್ರಜೆಗಳ ಸ್ವೇಚ್ಛಾ ಪ್ರವೃತ್ತಿ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii) (B) (i) ಮತ್ತು (iv)

(C) (ii) ಮತ್ತು (iii) (D) (i) ಮತ್ತು (iii)

**33.** ದೇಶದ ಅವನತಿಗೆ ಕಾರಣಗಳು :

(i) ಅನಕ್ಷರತೆ ಮತ್ತು ಅಧಿಕ ಜನಸಂಖ್ಯೆ

(ii) ಭಾಷಾವಾರು ಪ್ರಾಂತ ರಚನೆ

(iii) ಮೀಸಲಾತಿ ಧೋರಣೆ

(iv) ಜಾತೀಯತೆ ಮತ್ತು ಧಾರ್ಮಿಕ ರಾಜಕೀಯ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii) (B) (i) ಮತ್ತು (iv)

(C) (ii) ಮತ್ತು (iii) (D) (i) ಮತ್ತು (ii)

**34.** ಭಾರತದಲ್ಲಿ ಭ್ರಷ್ಟಾಚಾರಕ್ಕೆ ಮನ್ನಣೆ ದೊರೆತದ್ದು :

(A) ತ್ಯಾಗ ಬಲಿದಾನಗಳ ಜಾಗದಲ್ಲಿ ಹಣ ಹಾಗೂ ಅನುಕೂಲಗಳು

(B) ಬೆಲೆಯೇರಿಕೆ

(C) ನಿರುದ್ಯೋಗ

(D) ರಾಜಕಾರಣದ ಆಕರ್ಷಣೆ

**35.** ಸ್ವತಂತ್ರ ಭಾರತದಲ್ಲಿ ಗಮನಾರ್ಹವಾದ ಎರಡು ಅಂಶಗಳು :

(A) ಭಯ, ಭಕ್ತಿ ಮತ್ತು ಶ್ರದ್ಧೆಗಳ ಅನಗತ್ಯ

(B) ಯೋಜನೆಗಳು ಮತ್ತು ನಿರ್ವಹಣೆ

(C) ಅಧಿಕಾರ ಮತ್ತು ಆಡಳಿತ

(D) ರಾಜಕಾರಣ ಮತ್ತು ವಿಕೇಂದ್ರೀಕರಣ

**ಹೇಳಿಕೆ ವಿವರಣೆ ಆಧಾರಿತ ಬಹುಆಯ್ಕೆ ಮಾದರಿ :**

**36.** **ಹೇಳಿಕೆ :** ರಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನ ಇಂಪುಗಳ್ಗಾಗರಮಾದ ಮಾನಿಸರೆ ಮಾನಿಸರ್

**ವಿವರಣೆ :** ತ್ಯಾಗ, ಭೋಗ, ಅಕ್ಷರವಿದ್ಯೆ, ಸಂಗೀತ, ಚರ್ಚಾಗೋಷ್ಠಿಗಳಲ್ಲಿ ಆಸಕ್ತಿಯನ್ನು ಹೊಂದಿರುವವರೇ ನಿಜವಾದ ಮನುಷ್ಯರು.

(A) ಹೇಳಿಕೆ ತಪ್ಪು, ವಿವರಣೆ ಸರಿ (B) ಹೇಳಿಕೆ ಸರಿ, ವಿವರಣೆಯೂ ಸರಿ

(C) ಹೇಳಿಕೆ ತಪ್ಪು, ವಿವರಣೆಯೊ ತಪ್ಪು (D) ಹೇಳಿಕೆ ಸರಿ, ವಿವರಣೆ ತಪ್ಪು

**37.** **ಹೇಳಿಕೆ :** ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ.

**ವಿವರಣೆ :** ಕವಿಯಾದವನು ಉನ್ನತ ಕೀರ್ತಿ, ಐಶ್ವರ್ಯಗಳನ್ನು ಹೊಂದಲು ಎಲ್ಲರನ್ನೂ ಯಾವಾಗಲೂ ಹೊಗಳುತ್ತಾ ಕಾವ್ಯದಲ್ಲಿ ರಾಜರನ್ನು ಕೀರ್ತಿಸುತ್ತಾ ಬದುಕಬೇಕು.

(A) ಹೇಳಿಕೆ ತಪ್ಪು, ವಿವರಣೆಯೂ ತಪ್ಪು (B) ಹೇಳಿಕೆ ಸರಿ, ವಿವರಣೆಯೂ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ (D) ಹೇಳಿಕೆ ಸರಿ, ವಿವರಣೆ ತಪ್ಪು

**38.** **ಹೇಳಿಕೆ :** "ಗಂಡರೈವರು ಮೂರು ಲೋಕದ ಗಂಡರೊಬ್ಬಳನಾಳಲಾರಿರಿ".

**ವಿವರಣೆ :** ಐದು ಜನ ವೀರಾಧಿವೀರರಾದವರು ಮೂರು ಲೋಕಗಳನ್ನು ಗೆಲ್ಲದಿರುತ್ತಾರೆಯೆ ? ಮೂರು ಲೋಕಗಳನ್ನೇ ಗೆಲ್ಲಬಲ್ಲವರಿಗೆ ಒಬ್ಬ ಹೆಂಡತಿಯನ್ನು ಆಳುವುದು – ಗೆಲ್ಲುವುದು ಸುಲಭದ ಕೆಲಸವಾಗುತ್ತದೆ.

(A) ಹೇಳಿಕೆ ತಪ್ಪು, ವಿವರಣೆ ತಪ್ಪು (B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆಯೂ ಸರಿ (D) ಹೇಳಿಕೆ ತಪ್ಪು, ವಿವರಣೆ ಸರಿ

**39.** **ಹೇಳಿಕೆ :** ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ ಬಿಲ್ಲಾಗಿ ಇರಬೇಕು ಬಲ್ಲವರೊಳು.

**ವಿವರಣೆ :** ಮನುಷ್ಯನು ಬದುಕಿನಲ್ಲಿ ಯಶಸ್ವಿಯನ್ನು ಹೊಂದಬೇಕಾದರೆ ಯಾವಾಗಲೂ ನದಿಯೊಳಗೆ ಕಲ್ಲು ಅಚಲವಾಗಿರುವಂತೆ ತನ್ನ ನೀತಿ, ನಿಯಮ ನಿಷ್ಠೆಗಳಲ್ಲಿ ಅಚಲವಾಗಿರುವುದರೊಡನೆ ಬಂಧುಮಿತ್ರರಲ್ಲಿ ನಯವಿನಯಗಳೊಡನೆ ನಡೆದುಕೊಳ್ಳಬೇಕು.

(A) ಹೇಳಿಕೆ ಸರಿ, ವಿವರಣೆ ತಪ್ಪು (B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆಯೂ ಸರಿ (D) ಹೇಳಿಕೆ ತಪ್ಪು, ವಿವರಣೆ ಸರಿ

Adda247 GET IT ON Google Play

**40.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ನೇಮಿಚಂದ್ರ – ಲೀಲಾವತಿ ಪ್ರಬಂಧ

(B) ಬ್ರಹ್ಮಶಿವ – ಧರ್ಮಾಮೃತ

(C) ನಿಜಗುಣ ಶಿವಯೋಗಿ – ರಕ್ಷಾಶತಕ

(D) ದೇವರಾಜ – ದೇವರಾಜ ಚರಿತ್ರೆ

**41.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಶೈಲಜಾ ಉಡುಚಣ – ಬೆಕ್ಕಿನ ಕಣ್ಣು

(B) ಬಿ.ಟಿ. ಲಲಿತಾನಾಯಕ – ಮುಳ್ಳುಗಳು

(C) ವೀಣಾ ಶಾಂತೇಶ್ವರ – ನಕ್ಷತ್ರಗಳು

(D) ಗೀತಾ ನಾಗಭೂಷಣ – ಧುಮ್ಮಸು

**42.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಜಿ.ಎಸ್. ಶಿವರುದ್ರಪ್ಪ – ವಿಮರ್ಶೆಯ ವ್ರತ

(B) ಡಾ|| ಎಂ. ಚಿದಾನಂದ ಮೂರ್ತಿ – ಮಾರ್ಗ

(C) ಭಟ್ಟಾಕಳಂಕ – ಶಬ್ದಾನುಶಾಸನ

(D) ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ – ಕನ್ನಡ ಛಂದೋವಿಕಾಸ

**43.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ ?

(A) ಐ ಮತ್ತು ಔ – ಸಂಧ್ಯಕ್ಷರಗಳು

(B) ತಂಗಾಳಿ – ಕರ್ಮಧಾರಯ ಸಮಾಸ

(C) ಆಸ್ಪತ್ರೆ – ಅಚ್ಚಗನ್ನಡ ಪದ

(D) ಹವ್ಯಕ ಕನ್ನಡ – ಸಾಮಾಜಿಕ ಉಪಭಾಷೆ

**44.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ ?

(A) ಸಂಶೋಧನೆ – ಪು.ತಿ. ನರಸಿಂಹಾಚಾರ್

(B) ನಾಟಕ ಕಾರ – ಶ್ರೀರಂಗ

(C) ಆತ್ಮ ಚರಿತ್ರೆ – ಸಿದ್ಧಲಿಂಗಯ್ಯ

(D) ಭಾಷಾ ವಿಜ್ಞಾನಿ – ಕುಶಾಲಪ್ಪ ಗೌಡ

Adda247 GET IT ON Google Play

**ಬಹು ಆಯ್ಕೆಯ ಜೋಡಣೆ :**

**45.** (a) ಚಾಮರಸ (i) ಜೀವಂಧರ ಚರಿತೆ
(b) ಕೆಂಪು ನಾರಾಯಣ (ii) ಕಬ್ಬಿಗರ ಕಾವ
(c) ಭಾಸ್ಕರ (iii) ಬಸವ ಪುರಾಣ
(d) ಆಂಡಯ್ಯ (iv) ಪ್ರಭುಲಿಂಗಲೀಲೆ
(v) ಮುದ್ರಾ ಮಂಜೂಷ

| | *(a)* | *(b)* | *(c)* | *(d)* |
|---|---|---|---|---|
| (A) | (ii) | (iii) | (v) | (iv) |
| (B) | (iv) | (v) | (i) | (ii) |
| (C) | (i) | (iii) | (iv) | (ii) |
| (D) | (iii) | (i) | (ii) | (v) |

**46.** (a) ರಾವ್‌ಬಹಾದ್ದೂರ್ (i) ವಚನೋದ್ಯಾನ
(b) ಎಸ್.ವಿ. ರಂಗಣ್ಣ (ii) ಕನ್ನಡ ಗ್ರಂಥ ಸಂಪಾದನೆ
(c) ಸಿದ್ದಯ್ಯ ಪುರಾಣಿಕ (iii) ಸಂಶೋಧನ ತರಂಗ
(d) ಡಿ.ಎಲ್. ನರಸಿಂಹಾಚಾರ್ (iv) ಗ್ರಾಮಾಯಣ
(v) ರಂಗಬಿನ್ನಪ

| | *(a)* | *(b)* | *(c)* | *(d)* |
|---|---|---|---|---|
| (A) | (iv) | (v) | (i) | (iii) |
| (B) | (iii) | (ii) | (v) | (i) |
| (C) | (v) | (iii) | (ii) | (iv) |
| (D) | (iv) | (v) | (i) | (ii) |

Adda247

**47.** (a) ಹೊರೇಸ್ (i) ಕಾವ್ಯಭಾಷೆ
(b) ಲಾಂಗೈನಸ್ (ii) ಕಾವ್ಯಸಮರ್ಥನೆ
(c) ಸಿಡ್ನಿ (iii) ಇಮ್ಯಾಜಿನೇಷನ್
(d) ಕೋಲ್‌ರಿಜ್ (iv) ಮಹೋನ್ನತಿ
(v) ಕಾವ್ಯಕಲೆ

| | *(a)* | *(b)* | *(c)* | *(d)* |
|---|---|---|---|---|
| (A) | (v) | (iv) | (ii) | (iii) |
| (B) | (i) | (iii) | (v) | (ii) |
| (C) | (ii) | (v) | (i) | (iv) |
| (D) | (iv) | (i) | (iii) | (v) |

Adda247

GET IT ON Google Play

ಅನುಕ್ರಮ ಮಾದರಿ

ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ.

**48.** (A) ಕುಂ. ವೀರಭದ್ರಪ್ಪ, ಪಂಜೆ ಮಂಗೇಶರಾಯರು, ನಿಸಾರ್ ಅಹಮದ್, ಮಧುರ ಚೆನ್ನ

(B) ಮಧುರ ಚೆನ್ನ, ಪಂಜೆ ಮಂಗೇಶರಾಯರು, ಕುಂ. ವೀರಭದ್ರಪ್ಪ, ನಿಸಾರ್ ಅಹಮದ್

(C) ಪಂಜೆ ಮಂಗೇಶರಾಯರು, ಮಧುರ ಚೆನ್ನ, ನಿಸಾರ್ ಅಹಮದ್, ಕುಂ. ವೀರಭದ್ರಪ್ಪ

(D) ನಿಸಾರ್ ಅಹಮದ್, ಕುಂ. ವೀರಭದ್ರಪ್ಪ, ಪಂಜೆ ಮಂಗೇಶರಾಯರು, ಮಧುರ ಚೆನ್ನ

**49.** (A) ಮಾಡಿದ್ದುಣ್ಣೋ ಮಹಾರಾಯ, ದೇವರು, ಸಮುದ್ರದಾಚೆಯಿಂದ, ಮುಸ್ಸಂಜೆಯ ಕಥಾ ಪ್ರಸಂಗ

(B) ಮಾಡಿದ್ದುಣ್ಣೋ ಮಹಾರಾಯ, ಸಮುದ್ರದಾಚೆಯಿಂದ, ದೇವರು, ಮುಸ್ಸಂಜೆಯ ಕಥಾ ಪ್ರಸಂಗ

(C) ಸಮುದ್ರದಾಚೆಯಿಂದ, ಮುಸ್ಸಂಜೆಯ ಕಥಾ ಪ್ರಸಂಗ, ಮಾಡಿದ್ದುಣ್ಣೋ ಮಹಾರಾಯ, ದೇವರು

(D) ದೇವರು, ಮಾಡಿದ್ದುಣ್ಣೋ ಮಹಾರಾಯ, ಮುಸ್ಸಂಜೆಯ ಕಥಾ ಪ್ರಸಂಗ, ಸಮುದ್ರದಾಚೆಯಿಂದ

**50.** (A) ಕಿಟ್ಟೆಲ್ ಕೋಶ, ಕನ್ನಡ ಕೈಪಿಡಿ, ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

(B) ಕನ್ನಡ ಕೈಪಿಡಿ, ಕಿಟ್ಟೆಲ್ ಕೋಶ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಭಾರತೀಯ ಕಾವ್ಯಮೀಮಾಂಸೆ

(C) ಭಾರತೀಯ ಕಾವ್ಯಮೀಮಾಂಸೆ, ಕಿಟ್ಟೆಲ್ ಕೋಶ, ಕನ್ನಡ ಕೈಪಿಡಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

(D) ಕಿಟ್ಟೆಲ್ ಕೋಶ, ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಕೈಪಿಡಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

- o 0 o -

Space For Rough Work